**ಡಾ ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ**

2006–07ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಕೆ ಜಿ ಎಫ್ ವಿಧಾನಸಭಾ ಕ್ಷೇತ್ರಕ್ಕೆ ಪರಿಶಿಷ್ಟ ಜಾತಿಗೆ 10 ಮತ್ತು ಪರಿಶಿಷ್ಟ ವರ್ಗಕ್ಕೆ 05 ಕೊಳವೆಬಾವಿಗಳ ಗುರಿ ನಿಗದಿಪಡಿಸಲಾಗಿದೆ ಇದುವರೆವಿಗೂ ಈ ಕ್ಷೇತ್ರದಿಂದ ಕೊಳವೆಬಾವಿ ಸೌಲಭ್ಯ ಕೋರಿ ಅರ್ಜಿಗಳು ಬಂದಿರುವುದಿಲ್ಲ ಈ ಬಗ್ಗೆ ಜಿಲ್ಲಾ ವ್ಯವಸ್ಥಾಪಕರಿಗೆ ಫಲಾನುಭವಿಗಳನ್ನು ಗುರುತಿಸಲು ಸೂಕ್ತ ಮಾರ್ಗದರ್ಶನ ನೀಡಲಾಗಿದೆ

ಈ) **ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ**

ಮೆ ಕೆ ಎಸ್ ಎಂ ಆಗ್ರೋ ರಿಗ್ ಸರ್ವಿಸ್, ಮಾರುತಿ ನಗರ, ಶ್ರೀನಿವಾಸಪುರ, ಕೋಲಾರ ಜಿಲ್ಲೆ, ಇವರನ್ನು ಕೊಳವೆಬಾವಿ ಕೊರೆಯಲು ನೇಮಕ ಮಾಡಲಾಗಿರುತ್ತದೆ

ಡಿ **ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ**

ಮೇ ಕೆ ಎಸ್ ಎಂ ಆಗ್ರೋ ರಿಗ್ ಸರ್ವಿಸ್, ಶ್ರೀನಿವಾಸಪುರ ಹಾಗೂ ಮೆ ಶ್ವೇತಾ ಬೋರ್‌ವೆಲ್ಸ್, ಮುಳಬಾಗಿಲು ಈ ಎರಡು ಏಜೆನ್ಸಿಗಳನ್ನು ಕೋಲಾರ ಜಿಲ್ಲೆಯ ಕೊಳವೆ ಬಾವಿ ಕೊರೆಯಲು ನೇಮಕ ಮಾಡಲಾಗಿರುತ್ತದೆ

**ಡಾ: ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ**

ಮೆ ಶ್ವೇತಾ ಬೋರ್‌ವೇಲ್ಸ್, ಮುಳಬಾಗಿಲು

ಮೆ ಕೆ ಎಸ್ ಎಂ ಬೋರ್‌ವೆಲ್ಸ್, ಶ್ರೀನಿವಾಸಪುರ

**627 (533) ಶ್ರೀ ಆರ್ ರೋಷನ್ ಬೇಗ್ (ಜಯಮಹಲ್) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?**

ಅ) ರಾಜ್ಯದಲ್ಲಿರುವ ತಾಲ್ಲೂಕು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಇದೆಯೇ?

ಆ) ಹಾಗಿದ್ದಲ್ಲಿ ವಿವರಗಳನ್ನು ನೀಡುವುದು?

ಇ) ರಾಜ್ಯದಲ್ಲಿ 2000 ವೈದ್ಯರನ್ನು ನೇಮಕ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಈ) ಹಾಗಿದ್ದಲ್ಲಿ ವಿವರಗಳನ್ನು ನೀಡುವುದು?

**ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)**

ಅ) ಎಲ್ಲಾ 149 ತಾಲ್ಲೂಕು ಆಸ್ಪತ್ರೆಗಳನ್ನು 100 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸಲಾಗಿದೆ

ಆ) ಉದ್ಭವಿಸುವುದಿಲ್ಲ

ಇ) ಸರ್ಕಾರವು 500 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ನೇಮಕ ಮಾಡಲು ಅನುಮತಿ ನೀಡಿದ್ದು, ಇದರಲ್ಲಿ ಈಗಾಗಲೇ ಮೊದಲ ಹಂತವಾಗಿ 250 ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನಡೆದಿದೆ ಇದಲ್ಲದೇ ಖಾಲಿಯಿರುವ ಹುದ್ದೆಗಳನ್ನು ಒಪ್ಪಂದದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ

ಈ) ಮೊದಲ ಹಂತದಲ್ಲಿ 250 ವೈದ್ಯರನ್ನು ನೇಮಕಾತಿ ಮಾಡಿಕೊಳ್ಳಲು ಮೌಖಿಕ ಸಂದರ್ಶನ ನಡೆಸಲಾಗಿದ್ದು, ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಗೊಳಿಸಲಾಗುವುದು

**628 (953) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?**

ಅ) ಮೈಸೂರಿನ ಕೆ ಆರ್ ಆಸ್ಪತ್ರೆಯಲ್ಲಿ ಯಾವ ಯಾವ ರೋಗಗಳಿಗೆ ಸೇವಾ ಸೌಲಭ್ಯವನ್ನು ಕಲ್ಪಿಸಲಾಗಿದೆ (ಒಂದು ವರ್ಷದ ಅಂಕಿ ಅಂಶ ನೀಡುವುದು)?

ಆ) ಈ ಆಸ್ಪತ್ರೆಯಲ್ಲಿ ಇನ್ನೂ ಯಾವ ಯಾವ ಖಾಯಿಲೆಗಳಿಗೆ ಸೇವಾ ಸೌಲಭ್ಯ ಲಭ್ಯವಿರುವುವು (ವಿವರ ಒದಗಿಸುವುದು)?

ಇ) ಲಭ್ಯವಿಲ್ಲದ ಸೇವಾ ಸೌಲಭ್ಯಗಳನ್ನು ಕಲ್ಪಿಸುವ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

**ಡಾ ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು)**

ಅ)

| ಸೇವಾ ಸೌಲಭ್ಯ ವಿಭಾಗ | ಪ್ರಸ್ತುತ ಸಾಲಿನಲ್ಲಿ ಚಿಕಿತ್ಸೆ ಪಡೆದ ರೋಗಿಗಳ ಸಂಖ್ಯೆ |
|---|---|
| 1) ಶಸ್ತ್ರ ಚಿಕಿತ್ಸೆ (ಸಾಮಾನ್ಯ) | 8321 |
| 2) ಆರ್ಥೋಪೆಡಿಕ್ಸ್ | 2678 |